ಈ ಲೇಖನದ ವಿಷಯಾನುಕ್ರಮಣಿಕೆ


| | |
|---|---|
| ಶ್ರೀರಾಮನವಮೀ ಆಚರಣೆಯ ಕ್ರಮ | 2 |
| ರಾಮನವಮಿಯಂದು ಉಪವಾಸ ಮಾಡಬಾರದು | 3 |
| ರಾಮನವಮೀ ಪೂಜೆ | 9 |
| ಅರ್ಘ್ಯಪ್ರದಾನ | 10 |
| ಅರ್ಘ್ಯದ ಮಂತ್ರ, ಅರ್ಥ ಮತ್ತು ಕ್ರಮ | 11 |
| ಕೋಸಂಬರಿ, ಪಾನಕ, ಮಜ್ಜಿಗೆಗಳ ಸಮರ್ಪಣೆ | 14 |
| ಬ್ರಾಹ್ಮಣಭೋಜನ, ಸ್ವಯಂಪಾಕಗಳ ಸಮರ್ಪಣೆ | 14 |
| ರಾಮದೇವರಲ್ಲಿ ಮಾಡಬೇಕಾದ ಪ್ರಾರ್ಥನೆ | 18 |




## ಶ್ರೀರಾಮನವಮೀ ಆಚರಣೆಯ ಕ್ರಮ

ಭಗವಂತ ಶ್ರೀರಾಮಚಂದ್ರದೇವರಾಗಿ ಅವತರಿಸಿದ ದಿವಸ ರಾಮನವಮೀ. ಚೈತ್ರಮಾಸದ ಶುಕ್ಲಪಕ್ಷದ ನವಮೀ ಮಧ್ಯಾಹ್ನ ಕರ್ಕಾಟಕಲಗ್ನದಲ್ಲಿ, ಸೂರ್ಯ ಮೇಷರಾಶಿಯಲ್ಲಿದ್ದಾಗ ರಾಮದೇವರ ಅವತಾರವಾದದ್ದು.

ಮನುಷ್ಯರು ಹೇಗೆ ಬದುಕಬೇಕು ಎಂದು ತೋರಿಕೊಡಲು ಅವತರಿಸಿದ, ಸಜ್ಜನರಿಗೆ ಕಂಟಕನಾಗಿದ್ದ ರಾವಣನನ್ನು ಕೊಲ್ಲಲು ಅವತರಿಸಿದ ರಾಮದೇವರ ವಿಶೇಷ ಪೂಜೆಯನ್ನು ನಾವು ರಾಮನವಮಿಯನ್ನು ಆಚರಿಸಬೇಕು.

ರಾಮನವಮಿಯಂದು ಏನು ಮಾಡಬಾರದು, ಏನು ಮಾಡಬೇಕು ಎನ್ನುವದನ್ನು ಶ್ರೀಹರಿ ವಾಯು ದೇವತಾ ಗುರುಗಳ ಸ್ಮರಣೆ ಮಾಡಿ ತಿಳಿಯಲು ಪ್ರಯತ್ನಿಸೋಣ.

## ರಾಮನವಮಿಯಂದು ಉಪವಾಸ ಮಾಡಬಾರದು

ರಾಮನವಮಿಯಂದು ಉಪವಾಸ ಮಾಡಲೇ ಬೇಕು ಎಂಬ ವಚನಗಳಿವೆ.

**ಯಸ್ತು ರಾಮನವಮ್ಯಾಂ ತು**
**ಭುಂಕ್ತೇ ಮೋಹಾದನನ್ಯಧೀಃ ।**
**ಕುಂಭೀಪಾಕೇಷು ಘೋರೇಷು**
**ಪಚ್ಯತೇ ನಾತ್ರ ಸಂಶಯಃ ।**

ರಾಮನವಮಿಯಂದು ಯಾರು ಮೋಹದಿಂದ ತಿನ್ನುತ್ತಾರೆಯೋ ಅವರು ಕುಂಭೀಪಾಕದಲ್ಲಿ ದುಃಖವನನ್ನನುಭವಿಸುತ್ತಾರೆ, ಇದರ ಸಂಶಯವಿಲ್ಲ. ಹೀಗೆಲ್ಲ ವಾಕ್ಯಗಳಿವೆ.

ಶ್ರೀಕೃಷ್ಣಾಚಾರ್ಯರು ಸ್ಮೃತಿಮುಕ್ತಾವಲಿಯಲ್ಲಿ ಈ ರೀತಿಯ ವಚನಗಳನ್ನು ಉದಾಹರಿಸಿ ಪ್ರಶ್ನೆಯನ್ನು ಕೈಗೆತ್ತಿಕೊಂಡು ಭರದ್ವಾಜಸಂಹಿತೆಯ ವಚನದಿಂದ ಉತ್ತರವನ್ನು ನೀಡಿದ್ದಾರೆ.

ನಿಜ, ರಾಮನವಮಿಯಂದು ಉಪವಾಸದ ವಿಧಿ ಇದೆ. ಆದರೆ ನಮಗಲ್ಲ. ಯಾರು

ಶ್ರೀರಾಮಾವತಾರವಾದ ಮೇಲೆ ಶ್ರೀಕೃಷ್ಣಾವತಾರಕ್ಕಿಂತ ಮುಂಚೆ ಹುಟ್ಟಿದ್ದಾರೆಯೋ ಅವರು ರಾಮನವಮಿಯಂದು ಉಪವಾಸ ಮಾಡಬೇಕು.

ಶ್ರೀಕೃಷ್ಣಾವತಾರದ ನಂತರ ಹುಟ್ಟಿದವರು ಶ್ರೀಕೃಷ್ಣಜಯಂತಿಯಂದು ಮಾತ್ರ ಉಪವಾಸ ಮಾಡಬೇಕು. ದಶಾವತಾರದ ಬೇರೆಯ ಅವತಾರಗಳ ಜಯಂತಿಯಂದು ಮಾಡತಕ್ಕದ್ದಲ್ಲ.

**ಸರ್ವಾಸ್ವಪಿ ಜಯಂತೀಷು**
**ಪೂಜಾ ಕಾರ್ಯಾ ವಿಶೇಷತಃ।**
**ಸಾನ್ನಿಧ್ಯ ಏವ ಕರ್ತವ್ಯೋ**
**ಹ್ಯುಪವಾಸೋ ನ ದೂರಗೇ।**

ಎಲ್ಲ ಜಯಂತಿಗಳಲ್ಲಿಯೂ ವಿಶೇಷ ಪೂಜೆಯನ್ನು ಮಾಡಬೇಕು. ಹತ್ತಿರದ ಅವತಾರದ ಜಯಂತಿಯಂದು ಮಾತ್ರ ಉಪವಾಸವನ್ನು ಮಾಡಬೇಕು, ಅದರ ಹಿಂದಿನ ಅವತಾರಗಳ ಜಯಂತಿಯಂದು ಉಪವಾಸ ಮಾಡಬಾರದು.

ಅಂದರೆ ವರಾಹಾವತಾರವಾಗುವದಕ್ಕಿಂತ ಮುಂಚೆ ಮತ್ಸ್ಯಜಯಂತಿಯಂದು ಉಪವಾಸ, ಆ ನಂತರ ನರಸಿಂಹಾವತಾರವಾಗುವವರೆಗೆ ವರಾಹಜಯಂತಿಯಂದು ಉಪವಾಸ, ಆ ನಂತರ ಕೂರ್ಮಾವತಾರವಾಗುವವರೆಗೆ ನರಸಿಂಹಜಯಂತಿಯಂದು ಉಪವಾಸ, ಆ ನಂತರ ಪರಶುರಾಮಾವಾತಾರವಾಗುವವರೆಗೆ ವಾಮನಜಯಂತಿಯಂದು ಉಪವಾಸ, ಆ ನಂತರ ರಾಮಾವತಾರವಾಗುವವರೆಗೆ ಪರಶುರಾಮಜಯಂತಿಯಂದು ಉಪವಾಸ, ಆ ನಂತರ ಕೃಷ್ಣಾವತಾರವಾಗುವವರೆಗೆ ರಾಮನವಮಿಯಂದು ಉಪವಾಸ.

ಕೃಷ್ಣಾವತಾರವಾದ ನಂತರ ಕೇವಲ ಕೃಷ್ಣಜಯಂತಿಯಂದು ಉಪವಾಸ.

ಕೃಷ್ಣಾವತಾರವಾದ ನಂತರ ಬುದ್ಧಾವತಾರವಾಗಿದೆ, ಆದರೂ ಕೃಷ್ಣಜಯಂತಿಯಂದೇ ಉಪವಾಸ, ಕಾರಣ, ಬುದ್ಧಾವತಾರ ದುಷ್ಟಮೋಹನಕ್ಕಾಗಿ ಆದ ಅವತಾರ, ಹೀಗಾಗಿ ಆ ರೂಪದ ಸ್ಮರಣೆಯಷ್ಟೇ

ಹೊರತು ಅದಕ್ಕಾಗಿ ಉತ್ಸವ, ಉಪವಾಸಾದಿಗಳು ಇಲ್ಲ.

ಆದ್ದರಿಂದ ಇಡಿಯ ಕಲಿಯುಗದಲ್ಲಿ ಕೃಷ್ಣಜಯಂತಿಯಂದೇ ಉಪವಾಸ, ಕೃಷ್ಣನದೇ ಆರಾಧನೆ, ಸಮರ್ಪಣೆಯೂ ಶ್ರೀಕೃಷ್ಣನಿಗೇ.

ಹೀಗಾಗಿ ರಾಮನವಮಿಯ ದಿವಸ ಉಪವಾಸದ ವಿಧಿಯಿದ್ದರೂ, ಅದು ನಮಗಲ್ಲ, ಶ್ರೀಕೃಷ್ಣಾವತಾರಕ್ಕಿಂತ ಮುಂಚೆ ಹುಟ್ಟಿದ ಸಜ್ಜನರಿಗೆ.

ಆದ್ದರಿಂದ ನಾವು ರಾಮನವಮಿಯಂದು ಉಪವಾಸ ಮಾಡಬಾರದು.

ಉಪವಾಸದ ವಿಧಿ ಬೇಡ, ದೇವರ ಪ್ರೀತ್ಯರ್ಥವಾಗಿ ನಾವು ಉಪವಾಸ ಮಾಡುತ್ತೇವೆ ಎನ್ನುವ ಪ್ರಶ್ನೆಗೆ ಮಾಡಬಾರದು ಎಂದೇ ಉತ್ತರ. ಹೇಗೆ ಶ್ರಾದ್ಧವನ್ನು ಮಾಡಿ ಉಪವಾಸವನ್ನು ಮಾಡಬಾರದೋ ಹಾಗೆ ನಮಗೆ ಹತ್ತಿರದ ಅವತಾರದ ಜಯಂತಿಯಂದು ಮಾತ್ರ ಉಪವಾಸ ಮಾಡಬೇಕು, ಅದರ ಹಿಂದಿನ ಅವತಾರಗಳ ಜಯಂತಿಯಂದು ಉಪವಾಸ

ಮಾಡಬಾರದು ಎಂದು ವಿಧಿ ಇರುವದರಿಂದ "ಸಾನ್ನಿಧ್ಯ ಏವ ಕರ್ತವ್ಯೋ ಹ್ಯುಪವಾಸೋ ನ ದೂರಗೇ" ಸರ್ವಥಾ ಉಪವಾಸ ಮಾಡಬಾರದು.

ಮಹಾಜ್ಞಾನಿಗಳೂ, ಕರುಣಾಳುಗಳೂ ಆದ ಶ್ರೀ ಕೃಷ್ಣಾಚಾರ್ಯರು ಈ ಸಂದರ್ಭದಲ್ಲಿ ಮತ್ತೊಂದು ಪ್ರಶ್ನೆಯನ್ನು ಕೈಗೆತ್ತಿಕೊಂಡು ಉತ್ತರಿಸಿದ್ದಾರೆ.

"नन्वेवं सति वामनजयन्त्यामप्युपवासो न स्यात् तच्चानिष्टं सर्वैरपि क्रियमाणत्वादिति चेत्, न। तस्या वामनजयन्त्या न तत्त्वेनोपवासः, किन्तु श्रवणद्वादशीत्वेनोपवासः।तदुक्तं —
द्वादशीं श्रवणोपेतां यो नोपोष्यात् सुमन्दधीः।
शतजन्मार्जितं पुण्यं तत्क्षणादेव नश्यति" इति।

ಹಾಗಾದರೆ, ಭಾದ್ರಪದದ್ವಾದಶಿಯಂದು ಶ್ರವಣಾನಕ್ಷತ್ರ ಬಂದರೆ ನಾವು ಉಪವಾಸ ಮಾಡಬೇಕೋ? ಮಾಡಬಾರದೋ?

ಕಾರಣ ಅಂದು ವಾಮನಜಯಂತಿ. ಇತರ ಜಯಂತಿಗಳಲ್ಲಿ ಉಪವಾಸ ಮಾಡಬಾರದು

ಎಂದರೆ ವಾಮನಜಯಂತಿಯಂದೂ ಮಾಡಬಾರದು ಎಂದಾಯಿತಲ್ಲ. '

ಹಾಗಲ್ಲ, ನಾವು ಪ್ರತೀ ಭಾದ್ರಪದದ್ವಾದಶಿಯಂದು ಉಪವಾಸ ಮಾಡುವದಿಲ್ಲ. ಯಾವ ಭಾದ್ರಪದ ದ್ವಾದಶಿಯಲ್ಲಿ ಶ್ರವಣಾನಕ್ಷತ್ರವು ಮಧ್ಯಾಹ್ನವ್ಯಾಪಿನಿಯಾಗಿರುತ್ತದೆಯೋ ಆ ದಿವಸ ಮಾತ್ರ ಉಪವಾಸ ಮಾಡುತ್ತೇವೆ.

ಶ್ರವಣಾನಕ್ಷತ್ರವಿದ್ದ ದ್ವಾದಶಿಯಂದು ಉಪವಾಸ ಮಾಡಲೇಬೇಕು, ಮಾಡದಿದ್ದಲ್ಲಿ ನೂರು ಜನ್ಮದ ಪುಣ್ಯ ನಾಶವಾಗುತ್ತದೆ ಎಂಬ ವಚನವಿರುವದರಿಂದ ನಾವು ಉಪವಾಸ ಮಾಡುತ್ತೇವೆಯೇ ಹೊರತು ವಾಮನಜಯಂತಿ ಎಂಬ ಕಾರಣಕ್ಕಾಗಿ ಅಲ್ಲ.

ಹೀಗಾಗಿ, ಯಾವ ಜಯಂತಿಗಳಲ್ಲಿಯೂ ಜಯಂತಿ ಎನ್ನುವ ಕಾರಣಕ್ಕೆ ಉಪವಾಸ ಮಾಡಬಾರದು. ಶ್ರೀಕೃಷ್ಣಾಷ್ಟಮಿಯಂದು ಮಾತ್ರ ತಪ್ಪದೇ ಉಪವಾಸ ಮಾಡಬೇಕು.

## ರಾಮನವಮೀ ಪೂಜೆ

"ಸರ್ವಾಸ್ವಪಿ ಜಯಂತೀಷು ಪೂಜಾ ಕಾರ್ಯಾ ವಿಶೇಷತಃ" ಎಂದು ನಿಯಮವಿರುವದರಿಂದ ಆ ದಿವಸ ವಿಶೇಷ ಪೂಜೆಯನ್ನು ಮಾಡಬೇಕು.

ಪಂಚಾಮೃತ ಅಭಿಷೇಕ, ಮನೆಯಲ್ಲಿಯೇ ಬೆಳೆದ ಪರಿಶುದ್ಧವಾದ ಹೂಗಳಿಂದ, ಸಾವಿರ ತುಳಸೀದಳಗಳಿಂದ ಅರ್ಚನೆ, ಹಬ್ಬದಡುಗೆಯ ನೈವೇದ್ಯ, ವಿಶೇಷ ನೀರಾಜನ, ನಮಸ್ಕಾರಗಳಿಂದ ದೇವರನ್ನು ಪೂಜಿಸಬೇಕು.

ಎಲ್ಲದಕ್ಕಿಂತ ಮುಖ್ಯವಾಗಿ ಆ ದಿವಸ ಶ್ರೀರಾಮಚಂದ್ರದೇವರ ಚರಿತ್ರೆಯನ್ನು ಮಾಹಾತ್ಮ್ಯವನ್ನು ಶ್ರವಣ ಮಾಡಬೇಕು.

ಶ್ರೀರಾಮದೇವರ ಸ್ತೋತ್ರಗಳನ್ನು ಪಠಿಸಬೇಕು. ಹಾಡುಗಳನ್ನು ಹಾಡಬೇಕು.

## ಅರ್ಘ್ಯಪ್ರದಾನ

ದೇವರ ಪೂಜೆ ಮುಗಿದ ಬಳಿಕ ಮಧ್ಯಾಹ್ನ ಕರ್ಕಾಟಕಲಗ್ನದಲ್ಲಿ ಅರ್ಘ್ಯವನ್ನು ನೀಡಬೇಕು.

ರಾಮನವಮಿಯ ಸಂದರ್ಭದಲ್ಲಿ ಸಾಮಾನ್ಯವಾಗಿ ಮಧ್ಯಾಹ್ನ 12ರಿಂದ 2ಗಂಟೆಯವರೆಗೆ (ಸಾಮಾನ್ಯ ಲೆಕ್ಕ ಇದು, ಪಂಚಾಂಗ ನೋಡಿ ನಿರ್ಧರಿಸಿಕೊಳ್ಳಿ) ಕರ್ಕಾಟಕ ಲಗ್ನವಿರುತ್ತದೆ.

ಆ ದಿವಸ ತುಂಬ ಕಾರ್ಯವಿದ್ದವರು, ಅಲ್ಲಿಯವರೆಗೆ ಉಪವಾಸವಿದ್ದು ಕಾಯಲು ಸಾಧ್ಯವಿಲ್ಲದವರು ಬೆಳಿಗ್ಗೆ ಸೂರ್ಯೋದಯಾನಂತರ ಪೂಜೆಯನ್ನು ಮುಗಿಸಿ ಅರ್ಘ್ಯವನ್ನು ನೀಡತಕ್ಕದ್ದು.

## ಅರ್ಘ್ಯದ ಮಂತ್ರ, ಅರ್ಥ ಮತ್ತು ಕ್ರಮ

ಪೂರ್ವಾಭಿಮುಖವಾಗಿ ಮಣೆಯ ಮೇಲೆ ಕುಳಿತುಕೊಳ್ಳಬೇಕು.

ಆಚಮನಕ್ಕೊಂದು ಪಾತ್ರೆಯಲ್ಲಿ ನೀರು.
ಅರ್ಘ್ಯ ನೀಡಲು ಪರಿಶುದ್ಧವಾದ ನೀರು.
ಅರ್ಘ್ಯದ ನೀರನ್ನು ಬಿಡಲು ಅರ್ಘ್ಯಪಾತ್ರೆ.

ಆಚಮನ, ಪ್ರಾಣಾಯಾಮ ಮಾಡಿ ಸಂಕಲ್ಪ ಮಾಡಬೇಕು.

ಚೈತ್ರ ಮಾಸೇ ಶುಕ್ಲಪಕ್ಷೇ ನವಮ್ಯಾಂ ತಿಥೌ
ಶ್ರೀರಾಮಪ್ರಾದುರ್ಭಾವನಿಮಿತ್ತೇನ

ಅಸ್ಮದ್ಗುರ್ವಂತರ್ಗತ
ಪರಮಗುರ್ವಂತರ್ಗತ
ಸಂಜ್ಞಾಪತಿ ಸೂರ್ಯಾಂತರ್ಗತ
ಭಾರತೀರಮಣಮುಖ್ಯಪ್ರಾಣಾಂತರ್ಗತ
ಶ್ರೀವಿಷ್ಣುಪ್ರೇರಣಯಾ ಶ್ರೀವಿಷ್ಣುಪ್ರೀತ್ಯರ್ಥಂ
ಸೀತಾಪತಿ-ಶ್ರೀರಾಮಚಂದ್ರಾಯ ಅರ್ಘ್ಯಪ್ರದಾನಂ
ಕರಿಷ್ಯೇ.

ಆ ಬಳಿಕ ಅರ್ಘ್ಯದ ನೀರನ್ನು ತೆಗೆದುಕೊಂಡು ಬಲಗೈ ಮಧ್ಯಕ್ಕೆ ಹಾಕಿಕೊಂಡು ಕೆಳಗಿನ ಶ್ಲೋಕಗಳನ್ನು ಮೂರು ಬಾರಿ ಪಠಿಸುತ್ತ ಮೂರು ಬಾರಿ ಅರ್ಘ್ಯವನ್ನು ನೀಡಬೇಕು.

ಸಂಧ್ಯಾವಂದನೆ ಮಾಡುವಾಗ ಸೂರ್ಯನಿಗೆ ಅರ್ಘ್ಯ ನೀಡುವಂತೆ.

**ಕೌಸಲ್ಯಾಗರ್ಭಸಂಭೂತ**
**ಸದಾ ಸೌಮಿತ್ರಿವತ್ಸಲ**
**ಜಾನಕೀಸಹಿತೋ ರಾಮ**
**ಗೃಹಾಣಾರ್ಘ್ಯಂ ನಮೋಽಸ್ತು ತೇ**

ಕೌಸಲ್ಯಾದೇವಿಯರ ಗರ್ಭದಿಂದ ಪ್ರಾದುರ್ಭೂತನಾದ, ಲಕ್ಷಣನ ಮೇಲೆ ಅಪಾರವಾತ್ಸಲ್ಯವನ್ನು ತೋರಿದ, ರಾಮ ನಿನಗೆ ನಮಸ್ಕಾರಗಳು. ಸೀತಾದೇವಿಯರ ಸಮೇತನಾಗಿ ಅರ್ಘ್ಯವನ್ನು ಸ್ವೀಕರಿಸು.



## ಶ್ರೀಮನ್ ಮೂಲಪಟ್ಟಾಭಿರಾಮದೇವರು

ಶ್ರೀಮದಾಚಾರ್ಯರು ರಾಮೇಶ್ವರದಲ್ಲಿ ಚಾತುರ್ಮಾಸ್ಯಕ್ಕೆ ಕುಳಿತಾಗ, ವಿದ್ವಾಂಸರೆಲ್ಲರೂ ಬಂದು ಪ್ರತಿಮಾನಿರ್ಮಾಣದ ಕುರಿತು ಪ್ರಾರ್ಥನೆ ಮಾಡಿದಾಗ ಅವರ ಮುಂದೆಯೇ ದಿವ್ಯವಾದ ಲೋಹಗಳನ್ನು ಎರಕಹೊಯ್ದು ಆಚಾರ್ಯರು ನಿರ್ಮಾಣಮಾಡಿರುವ ಲೋಕೋತ್ತರ ಪ್ರತಿಮೆ. ವ್ಯಾಖ್ಯಾನಮುದ್ರಾಯುಕ್ತ  ಮೂಲಪಟ್ಟಾಭಿರಾಮದೇವರು.

ಶ್ರೀಮದ್ ವ್ಯಾಸರಾಜಸಂಸ್ಥಾನದ ಎರಡನೆಯ ಮುಖ್ಯಪ್ರತಿಮಾ.

## ಕೋಸಂಬರಿ, ಪಾನಕ, ಮಜ್ಜಿಗೆಗಳ ಸಮರ್ಪಣೆ

ಚೈತ್ರ ಮಾಸ ಆರಂಭವಾಗಿರುತ್ತದೆ. ಬಿರು ಬೇಸಿಗೆಯ ಕಾಲ.

ಹೀಗಾಗಿ ದೇಹಕ್ಕೆ ತಂಪನ್ನುಂಟುಮಾಡುವ ಹೆಸರುಬೇಳೆಯ ಕೊಸಂಬರಿ, ನೀರುಮಜ್ಜಿಗೆ, ನಿಂಬೆಹಣ್ಣಿನ ಪಾನಕ, ಕರಬೂಜದ ಪಾನಕಗಳನ್ನು ಮಾಡಿ ದೇವರಿಗೆ ನೈವೇದ್ಯ ಮಾಡಿ ಅದನ್ನು ಜಾತಿ ಮತ ಪಂಥ ಯಾವುದನ್ನೂ ಎಣಿಸದೆ ಮನೆಯ ಬಳಿ ಬರುವ ಎಲ್ಲರಿಗೂ ನೀಡತಕ್ಕದ್ದು.

## ಬ್ರಾಹ್ಮಣಭೋಜನ, ಸ್ವಯಂಪಾಕಗಳ ಸಮರ್ಪಣೆ

ದೂರ್ವಾಸಮುನಿಗಳು ಹತ್ತುಸಾವಿರ ವರ್ಷ ಉಪವಾಸದ ತಪಸ್ಸು ಮಾಡಿ ಮರಳಿರುತ್ತಾರೆ. ನಾನು ಮಾಡಿಟ್ಟ ಅಡಿಗೆಯನ್ನು ಉಣ್ಣುವದಿಲ್ಲ, ಮಾಡುವ ಅಡಿಗೆಯ ಅಡಿಗೆಯನ್ನೂ ಉಣ್ಣುವದಿಲ್ಲ, ಹೀಗಾಗಿ ನನ್ನ ಹಸಿವೆಯನ್ನು ಯಾರೂ ತೀರಿಸಲು ಸಾಧ್ಯವಿಲ್ಲ ಎಂದು ದೂರ್ವಾಸರು ನಿರ್ಧರಿಸಿ ರಾಮನ ಬಳಿಗೆ ಬರುತ್ತಾರೆ. ರಾಮದೇವರು ಅವರಿಗೆ ಯಾವ ಅಡಿಗೆಗಳ ಅಪೇಕ್ಷೆ ಎಂದು

ಕೇಳುತ್ತಾರೆ. ಅವರು ತಿಳಿಸುತ್ತಿದ್ದಂತೆ ಆ ಕ್ಷಣಕ್ಕೆ ಅಡಿಗೆಗಳನ್ನು ಸೃಷ್ಟಿಸಿ ದೂರ್ವಾಸರಿಗೆ ನೀಡಿ ಅವರ ಹಸಿವೆಯನ್ನು ತಣಿಸುತ್ತಾರೆ.

ರಾಮದೇವರ ಈ ಪರಮಾದ್ಭುತ ಶಕ್ತಿಯನ್ನು ನೆನೆದು ಆ ದಿವಸ ಉತ್ತಮ ಅಡಿಗೆಯನ್ನು ಮಾಡಿ ನೈವೇದ್ಯ ಮಾಡಿ ಶ್ರೇಷ್ಠರಾದ ವಿಷ್ಣುಭಕ್ತರಿಗೆ ನೀಡಿ ನಂತರ ಬಂಧುಗಳ ಜೊತೆಯಲ್ಲಿ ಕುಳಿತು ಊಟವನ್ನು ಮಾಡಬೇಕು.

ಮನೆಯಲ್ಲಿ ಅಡಿಗೆ ಮಾಡಿ ಬಡಿಸುವ ಸೌಕರ್ಯವಿಲ್ಲವಾದರೆ ಉತ್ತಮ ಬ್ರಾಹ್ಮಣರಿಗೆ ಸ್ವಯಂಪಾಕವನ್ನಾದರೂ ನೀಡಬೇಕು.

ಗೋವುಗಳಿಗೆ ಗ್ರಾಸ ನೀಡುವದು, ಸಕಲ ಪ್ರಾಣಿ ಪಕ್ಷಿಗಳಿಗೆ ನೀರು ಆಹಾರ ನೀಡುವದು, ವೃಕ್ಷಗಳಿಗೆ ನೀರೆರೆಯುವದು ರಾಮದೇವರಿಗೆ ಅತ್ಯಂತ ಪ್ರಿಯವಾದದ್ದು. ಅವನ್ನು ಅವಶ್ಯವಾಗಿ ಮಾಡಬೇಕು.

ಮಧ್ಯಾಹ್ನ ಸಂಜೆಗಳಲ್ಲಿ ರಾಮದೇವರ ಕಥೆಯನ್ನು ಕೇಳಿ, ಸೂರ್ಯ ಮುಳುಗಿದ ನಂತರ ದೇವರ

ಮುಂದೆ ದೀಪಗಳನ್ನು ಹಚ್ಚಿ ದಾಸಸಾಹಿತ್ಯದ ಹಾಡುಗಳ ಭಜನೆಯನ್ನು ಮಾಡತಕ್ಕದ್ದು. ಶ್ರೇಷ್ಠವಾದ ರಾಮದೇವರ ಸ್ತೋತ್ರಗಳನ್ನು ಭಕ್ತಿಯಿಂದ ಪಠಿಸತಕ್ಕದ್ದು.

ಆ ನಂತರ ಯಥಾಶಕ್ತಿ ನಮಸ್ಕಾರಗಳನ್ನು ದೇವರಿಗೆ ಸಮರ್ಪಿಸಿ, ರಾತ್ರಿಭೋಜನವನ್ನೂ ಮುಗಿಸಿ ಸಮಗ್ರ ರಾಮನವಮಿಯ ಆಚರಣೆಯನ್ನು ಮಧ್ವಪತಿ ಪಟ್ಟಾಭಿರಾಮದೇವರಿಗೆ ಸಮರ್ಪಿಸಿ ಮಲಗಬೇಕು.

ಶ್ರೀರಾಮಚಂದ್ರನ ಅನುಗ್ರಹ ಸದಾ ಸಕಲ ಸಜ್ಜನರ ಮೇಲಿರಲಿ. ಹಸಿವು ನೀರಡಿಕೆಗಳು ಪಶು-ಪಕ್ಷಿ-ಪ್ರಾಣಿ ಮೊದಲಾಗಿ ಯಾರನ್ನೂ ಕಾಡದಿರಲಿ. ಸಮೃದ್ಧವಾಗಿ ಮಳೆ ಬೆಳೆಗಳಾಗಲಿ.

ದೇಶವನ್ನಾಳುವ ಜನರಲ್ಲಿ ಸದ್ಬುದ್ಧಿಯಿರಲಿ, ದೇಶ ಕಾಯುವ ಯೋಧರಲ್ಲಿ ಅತುಲ ಪರಾಕ್ರಮವಿರಲಿ, ದೇಶ ಬೆಳೆಸುವ ವರ್ತಕರಲ್ಲಿ ಅಪಾರ ಕೌಶಲವಿರಲಿ, ದೇಶಕ್ಕೆ ಅನ್ನ ಬಡಿಸುವ ರೈತನ ಮನೆಯಲ್ಲಿ ಸಂಪತ್ತಿರಲಿ ಇಡಿಯ

ಸಮಾಜದ ಪ್ರತಿಯೊಬ್ಬ ವ್ಯಕ್ತಿ ಸುಖಿಯಾಗಿರಲಿ ಎಂದು ರಾಮದೇವರನ್ನು ಪ್ರಾರ್ಥನೆ ಮಾಡುತ್ತ, ವಿಶ್ವನಂದಿನಿಯ ಎಲ್ಲ ಬಾಂಧವರಿಗೂ ಶ್ರೀರಾಮನವಮಿಯ ಹಾರ್ದಿಕ ಶುಭಾಶಯಗಳು.

ನಿಮ್ಮೆಲ್ಲರಿಗೂ ದೀರ್ಘವಾದ ಆಯುಷ್ಯ, ದೃಢವಾದ ಆರೋಗ್ಯ, ಸಾತ್ವಿಕವಾದ ಸಂಪತ್ತು, ನಿಶ್ಚಲವಾದ ಭಕ್ತಿ, ಪರಿಶುದ್ಧವಾದ ಜ್ಞಾನ, ಪ್ರಾಮಾಣಿಕ ವೈರಾಗ್ಯಗಳನ್ನು ಕರುಣಿಸಿ ಶ್ರೇಷ್ಠವಾದ ಸಾಧನೆಯನ್ನು ನಿಮ್ಮಿಂದ ಮಾಡಿಸಲಿ ಎಂದು ಆ ಲಕ್ಷ್ಮಣ-ಭರತ-ಶತ್ರುಘ್ನಾಗ್ರಜ ಹನುಮದುಪಾಸಿತಚರಣ ಸೀತಾಪತಿ ಶ್ರೀಪಟ್ಟಾಭಿರಾಮದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

## ರಾಮದೇವರಲ್ಲಿ ಮಾಡಬೇಕಾದ ಪ್ರಾರ್ಥನೆ

ಶ್ರೀಮತ್-ಕವೀಂದ್ರತೀರ್ಥ ಗುರುಸಾರ್ವಭೌಮರ ದಿವ್ಯ ಪರಂಪರೆಯ ಶ್ರೀಮದ್ ರಾಘವೇಂದ್ರ ತೀರ್ಥಸಂಸ್ಥಾನದ ಭೂಷಾಮಣಿ ಶ್ರೀಸುಮತೀಂದ್ರತೀರ್ಥ ಗುರುಸಾರ್ವಭೌಮರು

ಹಾಗೂ

ಮಾಧ್ವ ಗೃಹಸ್ಥ ಜ್ಞಾನಿಗಳಲ್ಲಿಯೇ ಅಲಂಕಾರಪ್ರಾಯರಾದ ಶ್ರೀ ಕಾಶೀ ತಿಮ್ಮಣ್ಣಾಚಾರ್ಯರು ಹೇಳಿಕೊಟ್ಟಿರುವ

ಶ್ರೀರಾಮಚಂದ್ರದೇವರಲ್ಲಿ ನಾವು ಮಾಡಬೇಕಾದ ಎರಡು ಪ್ರಾರ್ಥನೆಗಳ ಅರ್ಥಾನುಂಧಾನ ಇಲ್ಲಿದೆ. ಮೈಮನಗಳನ್ನು ಪುಳಕಗೊಳಿಸುವ, ಕಣ್ಮನಗಳನ್ನು ಆರ್ದ್ರಗೊಳಿಸಿ ಜೀವಚೈತನ್ಯವನ್ನು ಸೀತಾಪತಿಯ ಪಾದದಲ್ಲಿರಿಸುವ ಈ ಇಬ್ಬರು ಮಹಾನುಭಾವರ ವಚನಗಳನ್ನು ತಪ್ಪದೇ ಆಲಿಸಿ. 👇 Tocuh the link

[http://vishwanandini.com/fullupanyasa.php?serialnumber=VNU024](http://vishwanandini.com/fullupanyasa.php?serialnumber=VNU024)

## ಸಂಸ್ಕೃತ ಸುರಭಿ

ವಿಶ್ವನಂದಿನಿಯ ಜ್ಞಾನದೇಗುಲದಲ್ಲಿ ಸಂಸ್ಕೃತದ ಪಾಠಗಳು ಆರಂಭವಾಗಿವೆ.

ನಮ್ಮ ಜೀವದ ಭಾಷೆ, ದೇವತೆಗಳ ಭಾಷೆ, ಭಗವಂತನನ್ನು ತಿಳಿಸಿಕೊಡುವ ಶಾಸ್ತ್ರಗಳಿರುವ ಭಾಷೆ ಸಂಸ್ಕೃತ. ಅಂತಹ ಶ್ರೇಷ್ಠ ಭಾಷೆಯನ್ನು ಈಗ ಮನೆಯಲ್ಲಿಯೇ ಕುಳಿತು ಕಲಿಯಬಹುದು. ಯಾವುದೇ ಶುಲ್ಕ ತೆರಬೇಕಾಗಿಲ್ಲ.

**ಬನ್ನಿ ಈ ವಿದ್ಯಾದಾನವನ್ನು ಸ್ವೀಕರಿಸಿ.**
**ಎಲ್ಲ ಸಜ್ಜನರಿಗೂ ತಿಳಿಸಿ.**

Link to download Vishwanandini

https://play.google.com/store/apps/details?id=com.v2.vishwanandini&hl=en

**ಸಂಸ್ಕೃತ ಕಲಿಯೋಣ**
**ಸಂಸ್ಕೃತಿ ಉಳಿಸೋಣ**

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name VISHWANANDINI**
- **Account Number 35368588017**
- **Account Type Current Account**
- **Bank State Bank of India**
- **Branch T. Narasipura, Mysore**
- **NEW IFSC SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಿಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India
nagendracharya@yahoo.co.in
WhatsApp: 9901 551 491